ಇ) ಸದ್ಯದಲ್ಲಿ, ಧುಲ್ಕೋಡ್(ಇಂಡಿ)ನಲ್ಲಿ 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಮೇಲೆ ಇದರಲ್ಲಿ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನಿಂದ ಕ್ಯಾಪಿಟೇಷನ್ ಶುಲ್ಕದ ವಸೂಲಿ

3467 - ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನವರು ವಸೂಲು ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕದ ಮೊತ್ತ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಜಿ.ಎಫ್.ನ ಅನುದಾನಿತ, ಅನುದಾನ ರಹಿತ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರ ವೇತನ

3466 - ಶ್ರೀ ಬಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಜಿ.ಎಫ್. ವ್ಯಾಪ್ತಿಯಲ್ಲಿ ಬರುವ ಪಾಸಗಿ ಅನುದಾನಿತ, ಅನುದಾನರಹಿತ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಾಧ್ಯಾಯರುಗಳಿಗೆ ಅವರು ನೇಮಕಾತಿಗೊಂಡ ದಿನಾಂಕದಿಂದ ವೇತನವನ್ನು ಪಾವತಿ ಮಾಡಲಾಗಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ನಿಗಧಿಪಡಿಸಿದ ಸಮಯದಲ್ಲಿ ವೇತನವನ್ನು ಶಿಕ್ಷಕರುಗಳಿಗೆ ನೀಡಲಾಗುತ್ತಿದೆ.

ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳನ್ನು ಜಾರಿಗೆ ತರುವುದು.

3405 - ಶ್ರೀ ಜೌಡ ರೆಡ್ಡಿ.(ಚಿಂತಾಮಣಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ಗ್ರಾಮಗಳಲ್ಲಿರುವ ಬಡವರು ಹಾಗೂ ದುರ್ಬಲ ವರ್ಗದ ಜನರು ಆಹಾರ ಪದಾರ್ಥಗಳನ್ನು ಪಡೆಯಲು ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ಎಂದಿನಿಂದ ಜಾರಿಗೆ ತರಲಾಯಿತು?*

ಆ) *ಶ್ರೀಮಂತರು ಹಾಗೂ ಆರ್ಥಿಕವಾಗಿ ಮುಂದುವರಿದ ಜನರಿಗೆ ಕಾನೂನು ಬಾಹಿರವಾಗಿ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?*

ಈ) *ಸುಮಾರು ಶೇಕಡ 50ರಷ್ಟು ಮಂದಿ ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ಗ್ರಾಮದ ಜನರಿಗೆ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸಲು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*